ನಡೆಸಿಕೊಂಡು ಬಂದ ಕೃಷಿಯನ್ನು ಈ ಮಗ ಮತ್ತಷ್ಟು ಉಮೇದಿನಿಂದ ಮುಂದುವರಿಸುತ್ತಿದ್ದ. ಪ್ರಾಯ ತುಂಬಿ ತುಳುಕುವ ಯುವಕನಲ್ಲವೇ? ನಾಳೆ ತನ್ನ ಮಗಳಿಗೂ ಮದುವೆಯಾದರೆ ಈ ಮನೆಯಲ್ಲಿ ಓಡಾಡಿಕೊಂಡಿರಲು ಮತ್ಯಾರಿದ್ದಾರೆ? ಬಾವನಿಗೆ ವಯಸ್ಸು ಹೆಚ್ಚಾಗುತ್ತಾ ಹೋಗುತ್ತದೆಯಲ್ಲದೆ ಕಮ್ಮಿಯಾಗುತ್ತಾ ಬರುವುದಿಲ್ಲವಲ್ಲ? ಅವಳ ದಿಕ್ಕೆಂಟಂತಾ ಮುಖ ನೋಡಿಯೇ ಬಾವ ಅವಳ ಅಂತರಂಗವನ್ನು ಅರ್ಥೈಸಿಕೊಂಡಿದ್ದರು,

'ಹುಡುಗ ಹೊರಗಿನ ಪ್ರಪಂಚ ನೋಡಲಿ ಮಾರಾಯ್ತೀ. ಸ್ವಂತ ದುಡಿಮೆಯ ಕಷ್ಟ ಅವನಿಗೂ ಗೊತ್ತಾಗ್ಲಿ. ಕೈಗೆ ನಾಕು ಕಾಸು ಬಂದ್ರೆ ಯಾರಿಗೆ ಕೈಂಯಿ? ನಿಂಗೆ ಮನಸ್ಸಿಗೆ ಕಷ್ಟ ಆಗುತ್ತೇಂತ ಗೊತ್ತಿದೆ. ಆದ್ರೆ ನಿಮ್ಮ ಒಳ್ಳೇದಕ್ಕೇ ಹೇಳ್ತಿರೋದು..'

ಬಾವ ಮಾತಿಗೆ ಪೂರ್ಣವಿರಾಮ ಇಟ್ಟುಬಿಟ್ಟಿದ್ದಾರೆ. ಕರುಣಾಕರ ಕೂಡಾ ಮನೆ ಬಿಟ್ಟು ಹೊರಡಲು ಒಂಟಿಗಾಲಲ್ಲಿ ಕಾದು ನಿಂತಿದ್ದಾನೆ. ಬಾವನಿಗೆ ಎದುರು ಮಾತಾಡಿ ಗೊತ್ತಿಲ್ಲದವಳಿಗೆ ಈ ಪ್ರಸಂಗ ಎದುರಿಸಬೇಕಾದ್ದು ಅನಿವಾರ್ಯ. ಒಂದು ವಿಷಯ ಅವಳಿಗೆ ಗೊತ್ತಿರಲಿಲ್ಲ. ಅವಳ ಕಣ್ಣ ಮರೆಯಲ್ಲಿ ಮಗ ತನ್ನ ತಂಗಿಗೆ ಭಾಷೆ ಕೊಟ್ಟಿದ್ದ, 'ಎಷ್ಟೇ ಕಷ್ಟ ಆಗ್ಲಿ, ನಿನ್ನ ಎಂಜಿನಿಯರಂಗ್ ಓದಿಸ್ತೀನಿ ಕಣೇ. ನನ್ನ ಬೆನ್ನ ಹಿಂದೆ ಮತ್ಯಾರಿರ್ಲಿಲ್ಲ. ನಿನ್ನ ಹಿಂದೆ ನಾನಿದೀನಿ. ಚೆನ್ನಾಗಿ ಓದಿ ಮೆರಿಟ್ ಸೀಟು ತಗೋಬೇಕು ಗೊತ್ತಾಯ್ತಾ? ಅದೂ ಅಲ್ದೆ'

"..."

'ಅಮ್ಮ ಎಷ್ಟು ವರ್ಷ ಕತ್ತೆಚಾಕರಿ ಮಾಡ್ಕಂಡಿರ್ಬೇಕು? ಎಂತದೂ ಗೊತ್ತಾಗಲ್ಲ ಅವಳಿಗೆ. ಬಾಯ್ತುಂಬ ಮಾತಾಡೋರೆಲ್ಲಾ ಒಳ್ಳೆಯೋರು ಅಂದ್ಕಂಬಿಡ್ತಾಳೆ. ಇನ್ನೊಸೆಂಟ್ ನಮ್ಮಮ್ಮ'

ಕರುಣಾಕರನ ಕಂಠ ಆರ್ದ್ರವಾಯ್ತೇ? ಕಣ್ಣು ತುಂಬಿ ಬಂತೇ? ತಂಗಿಗೆ ಕಾಣದಂತೆ ಅವನು ಮುಖ ತಿರುಗಿಸಿಕೊಂಡಿದ್ದ.

'ಹಿರಿಯಪ್ಪ ಕೆಟ್ಟೋರು ಅಂತ ನಾನು ಹೇಳ್ತಿರೋದಲ್ಲ. ಕೆಟ್ಟತನಕ್ಕೂ, ಸ್ವಾರ್ಥಕ್ಕೂ ವ್ಯತ್ಯಾಸ ಇರುತ್ತೆ. ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ ಮಾತಾಡೋರು ಒಳ್ಳೆಯೋರು ಅಂದ್ಕೊಳ್ಳೋದು ನಮ್ಮ ಪೆದ್ದುತನ ಆಗುತ್ತೆ. ಪಂಜರದ ಪಕ್ಷಿಗೆ ಕ್ರಮೇಣ ಅದು ಎಷ್ಟು ಅಭ್ಯಾಸವಾಗಿಬಿಡುತ್ತೆ ಅಂದ್ರೆ ಬಾಗಿಲು ತೆಗೆದಿಟ್ರೂ ಹೊರಗೆ ಹಾರೋಕೆ ಹೆದರುತ್ತೆ. ಪಂಜರದೊಳಗೆ ಸುಖವಾಗಿ, ಸುರಕ್ಷಿತವಾಗಿದೀನಿ ಅಂದ್ಕೊಂಡು ಅಲ್ಲೇ ಸುಳಿದಾಡಿಕೊಂಡಿರುತ್ತೆ. ಇದಕ್ಕೆ ಏನನ್ಬೇಕು ಹೇಳು ನೀನೇ."

ಸುಖ ಅನ್ನುವುದು ಮನದ ಸ್ಥಿತಿ ಅನ್ನಲು ಕಿಶೋರಿಗೆ ಗೊತ್ತಾಗಲಿಲ್ಲ. ಅಣ್ಣ ತಾನು ಇಷ್ಟಪಟ್ಟ ಓದನ್ನು ಓದಿಸುತ್ತೇನೆಂದು ಭರವಸೆ ಕೊಟ್ಟಿದ್ದು ಅವಳಿಗೆ ಪರಮಾನ್ನ ಸುರಿದಷ್ಟು ಖುಷಿ ಕೊಟ್ಟಿತ್ತು.

***

ಕರುಣಾಕರ ತನ್ನ ವಿದ್ಯೆಗೆ ತಕ್ಕ ನೌಕರಿ ಹುಡುಕಿಕೊಂಡು ಬೆಂಗಳೂರಿನಲ್ಲಿ ನೆಲೆ ಕಂಡುಕೊಂಡ. ಇತ್ತ ಕುಸುಮಾ ಪಿ.ಯು. ಮುಗಿಸಿದಳು, ಉತ್ತಮ ದರ್ಜೆಯಲ್ಲಿ. ಒಂದೆರಡು ವರ್ಷ ಮನೆಯಲ್ಲಿರಲಿ. ಆಮೇಲೆ ಅಕ್ಕಂದಿರ ಹಾಗೆ ಮದುವೆ ಮಾಡಿ ಒಳ್ಳೆಯ ಮನೆ ಸೇರಿಸಿಬಿಟ್ಟರೆ ಅಲ್ಲಿಗೆ ತನ್ನ ಕರ್ತವ್ಯ, ಅಲ್ಲಲ್ಲ, ಮನೆಯವರ ಕರ್ತವ್ಯ ಮುಗಿಯಿತು ಎಂದು ಕಮಲಾಕ್ಷಿ ಯೋಚಿಸಿದಳು. ಬಾವ ಹೇಳಿದ್ದೂ ಅದೇ.

'ಈಗಿಂದ ಗಂಡು ಹುಡುಕೋಕೆ ಶುರು ಮಾಡಿದ್ರೆ ಸರಿಯಾದ ಮನೆ ಸಿಗೋಕೆ ಒಂದೆರಡು ವರ್ಷ ಕಾಯ್ಬೇಕಾದೀತು, ಏನಂತಿ?' ನಾದಿನಿಯೊಡನೆ ಒಂದು ಸಮಾಲೋಚನೆ.

'ನೀವು ಹೇಳಿದ ಹಂಗೆ ಬಾವ...' ನಿರೀಕ್ಷಿಸಿದ ಉತ್ತರ ಬಂತು ಕಮಲಾಕ್ಷಿಯಿಂದ.

ಅಲ್ಲೇ ಸುಳಿದಾಡಿಕೊಂಡಿದ್ದಳು ಕುಸುಮಾ. ಅವಳ ಕಿವಿಗೆ ಬೀಳಲೆಂದೇ ಅವಳ ಉಪಸ್ಥಿತಿಯಲ್ಲಿ ಈ ಮಾತಾಡಿದ್ದರು ಹಿರಿಯಪ್ಪ.

'ನಾನು ಮುಂದೆ ಓದ್ಬೇಕು ಹಿರಿಯಪ್ಪ, ಸಿ.ಇ.ಟಿ. ಚೆನ್ನಾಗಿ ಮಾಡಿದೀನಿ. ನಂಗೆ ಮೆರಿಟ್ ಸೀಟು ಸಿಗುತ್ತೆ, ಗ್ಯಾರಂಟಿ ಉಂಟು ನಂಗೆ...'

'ನೋಡಿದ್ಯಾ?' ಎನ್ನುವಂತೆ ಹಿರಿಯಪ್ಪ ಕಮಲಾಕ್ಷಿಯ ಮುಖ ನೋಡಿದ್ದರು.

'ಹೇಳಿದ್ದು ಕೇಳೇ. ತಿಂದಿದ್ದು ಕಣ್ಣಿಗೆ ಬಂದಿದ್ಯಾ?' ಸಿಡುಕಿದಳು ಕಮಲಾಕ್ಷಿ. ಈ ಗದರುವಿಕೆಯಲ್ಲಿ ಬಾವನನ್ನು ಮೆಚ್ಚಿಸುವ ಉದ್ದೇಶ ಕೂಡಾ ಇದೆ ಎಂದು ಅನಿಸಿತು ಹುಡುಗಿಗೆ.